**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 401/2023**

| | | |
|---|---|---|
| ಹೆಸರು | ಶ್ರೀ ಮಹದೇವನಾಯಕ | ಚಾಸಾಃ 01 |
| ತಂದೆ ಹೆಸರು | ಶ್ರೀ ಸಿದ್ದನಾಯಕ | ಫ್ರಾಸಾಃ 01 |
| ವಯಸ್ಸು | 62 ವರ್ಷ | ಸಾಕ್ಷಿಯನ್ನು ದಿನಾಂಕಃ 23.06.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ಕೂಲಿ | |
| ವಾಸ | ಹೊರೆಯಾಲ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಚಾಸಾ–2 ನನ್ನ ಮಗ. ಚಾಸಾ–3 ನನಗೆ ಗೊತ್ತು. ಸುಮಾರು 3 ವರ್ಷಗಳ ಹಿಂದೆ ಸಂಜೆ 6.30 ರ ಸಮಯಕ್ಕೆ ಚಾಸಾ–6 ರವರು ನನಗೆ ಕರೆ ಮಾಡಿ ನನ್ನ ಮಗನಿಗೆ ಮಹದೇವಪ್ಪನ ಜಮೀನಿನ ಹತ್ತಿರ ಅಪಘಾತವಾಗಿದೆ ಎಂದು ತಿಳಿಸಿದರು. ನನ್ನ ಮಗ ಬೇಗೂರಿಗೆ ಹೋಗುತ್ತೇನೆ ಎಂದು ಚಾಸಾ–3 ರವರ ಜೊತೆ ಹೋಗಿದ್ದರು. ನಂತರ ನಾನು ಘಟನಾ ಸ್ಥಳಕ್ಕೆ ಹೋದೆ. ನನ್ನ ಮಗನಿಗೆ ಬಲಗೈ, ಬಲತೊಡೆ, ತಲೆ, ಎಡಗೈ ಮತ್ತು ಮೈಕೈಗೆ ಗಾಯವಾಗಿತ್ತು. ಚಾಸಾ–3 ರವರ ಎರಡು ಕಾಲುಗಳಿಗೂ ಪೆಟ್ಟಾಗಿತ್ತು. ನನ್ನ ಮಗ ಸ್ಲೆಂಡರ್ ಬೈಕ್ ನಲ್ಲಿ ಚಾಸಾ–3 ರವರ ಜೊತೆ ಬೇಗೂರಿಗೆ ಹೋಗುತ್ತಿದ್ದ. ಚಾಸಾ–6 ರವರನ್ನು ನಾನು ವಿಚಾರಿಸಲಾಗಿ ಚಾಸಾ–2 ಮತ್ತು 3 ರವರು ಬೇಗೂರು ಕಡೆಗೆ ಹೋಗುತ್ತಿದ್ದು, ಆರೋಪಿಯು ಬೇಗೂರು ಕಡೆಯಿಂದ ಟ್ರಾಕ್ಟರ್ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಡಿಕ್ಕಿ ಪಡಿಸಿ, ನಿಲ್ಲಿಸದೆ ಹೊರಟುಹೋದ ಎಂದು ಹೇಳಿದರು.

ಟ್ರಾಕ್ಟರ್ ಚಾಲಕನ ಹೆಸರು ಕುಮಾರ ಎಂದು ಗೊತ್ತಾಯಿತು. ನಾನು ಅಂಬೂಲೇನ್ಸ್ ನಲ್ಲಿ ಚಾಸಾ–2 ಮತ್ತು 3 ರವರನ್ನು ಬೇಗೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೇವು. ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ–2 ಮತ್ತು 3 ರವರನ್ನು ಕೆ.ಆರ್. ಆಸ್ಪತ್ರೆಗೆ ನಂತರ ಚಾಸಾ–2 ಜೆ.ಎಸ್.ಎಸ್. ಆಸ್ಪತ್ರೆಗೆ ಮತ್ತು ಚಾಸಾ–3 ರವರನ್ನು ಶುಭೋದಯ ಆಸ್ಪತ್ರೆಗೆ ಸೇರಿಸಿದೇವು. ಅಪಘಾತವಾದ ಎರಡು ದಿನಗಳ

ನಂತರ ನಾನು ದೂರು ನೀಡಿದೆ. ನಂತರ ಪೊಲೀಸರು ಅಪಘಾತ ಸ್ಥಳದಲ್ಲಿ ಮಹಜರ್ ಮಾಡಿದರು. ಪೊಲೀಸರಿಗೆ ಅಪಘಾತವಾದ ಸ್ಥಳವನ್ನು ನಾನು ತೋರಿಸಿದೆ. ಸದರಿ ಮಹಜರ್ ನ್ನು ಸಂಜೆ 6.00 ರಿಂದ 7.00 ರವರೆಗೆ ಮಾಡಿದರು. ಆ ಕಾಲಕ್ಕೆ ನಾನು, ಚಾಸಾ–4 ಮತ್ತು 5 ರವರು ಹಾಜರಿದ್ದೇವು. ಆ ಕಾಲಕ್ಕೆ ಫೋಟೋ ತೆಗೆದರು. ನಂತರ ಪೊಲೀಸ್ ಠಾಣೆಯಲ್ಲಿ ಅದೇ ದಿನ ನಾನು ವಾಹನವನ್ನು ಹಾಜರುಮಾಡಿದ ಮೇರೆಗೆ ಅದರ ಅಮಾನತ್ತು ಮಹಜರ್ ನ್ನು ಮಾಡಿದರು. ಆ ಕಾಲಕ್ಕೆ ನಾನು, ಚಾಸಾ–4 ಮತ್ತು 5 ರವರು ಹಾಜರಿದ್ದರು. ಆ ಕಾಲಕ್ಕೆ ಫೋಟೋ ತೆಗೆದರು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅಪಘಾತಕ್ಕೆ ಒಳಗಾದ ವಾಹನಗಳನ್ನು ನೋಡಿದರೆ ಗುರುತಿಸಬಲ್ಲೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ಸ್ಥಳ ಮಹಜರ್ ನೋಡಿ ಗುರುತಿಸಿದ್ದು, ಅದನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ(ಎ) ಎಂದು ಗುರ್ತಿಸಲಾಯಿತು. ಆ ಕಾಲಕ್ಕೆ ತೆಗೆದ ಎರಡು ಫೋಟೋಗಳನ್ನು ನಿಪಿ3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಮಹಜರ್ ನೋಡಿ ಗುರುತಿಸಿದ್ದು, ಅದನ್ನು ನಿಪಿ5 ಎಂದು, ಸಾಕ್ಷಿಯ ಸಹಿಯನ್ನು ನಿಪಿ5(ಎ) ಎಂದು ಗುರ್ತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿ6 ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 29.11.2022 ರಂದು ಸಂಜೆ 6.45 ರ ಸಮಯದಲ್ಲಿ ಚಾಸಾ–2 ಮತ್ತು 3 ರವರು ಬೇಗೂರು ಕಡೆಗೆ ತಮ್ಮ ದ್ವಿ–ಚಕ್ರ ವಾಹನದಲ್ಲಿ ಹೊಗಿದ್ದರು ಎಂದರೆ ಸರಿ. ಚಾಸಾ–6 ರವರನ್ನು

ವಿಚಾರಿಸಲಾಗಿ ಬೇಗೂರಿಗೆ ಕೆಲಸದ ನಿಮಿತ್ತ ಹೋಗಿ ಬೈಕಿನಲ್ಲಿ ಬರುತ್ತಿದ್ದಾಗ ಹೊರೆಯಾಲಕ್ಕೆ ಬರುತ್ತಿದ್ದಾಗ ನನ್ನ ಹಿಂದೆ ಒಂದು ಟ್ರಾಕ್ಟರ್ ನ ಚಾಲಕ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮಹದೇವಪ್ಪ ಎಂಬುವವರ ಜಮೀನಿನ ಹತ್ತಿರ ಎದುರಿಗೆ ಬರುತ್ತಿದ್ದ ಕೆಎ–10–ಇಡಿ–5196 ದ್ವಿ–ಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿತು ಎಂದು ಹೇಳಿದ ಎಂದರೆ ಸರಿ. ಅಪಘಾತಪಡಿಸಿದ ಟ್ರಾಕ್ಟರ್ ಸಂಖ್ಯೆ.ಕೆಎ–09–ಟಿ–8609 ಆಗಿತ್ತು ಎಂದರೆ ಸರಿ. ನಂತರ ನಾನು ಮತ್ತು ಚಾಸಾ–6 ರವರು ಚಾಸಾ–2 ಮತ್ತು 3 ರವರನ್ನು ಕರೆದುಕೊಂಡು ಆಸ್ಪತ್ರೆಗೆ ಹೋದೇವು ಎಂದರೆ ಸರಿ. ದಿಃ 01.12.2022 ರಂದು ಘಟನಾ ಸ್ಥಳದಲ್ಲಿ ಮದ್ಯಾಹ್ನ 3.00 ರಿಂದ 3.45 ರವರೆಗೆ ನಿಪಿ2 ರಂತೆ ಮಹಜರ್ ಜರುಗಿಸಿದರು ಎಂದರೆ ಸರಿ. ಅದೇ ದಿನ ನಾನು ಹಾಜರುಪಡಿಸಿದ ಕೆಎ–10–ಇಡಿ–5196 ಕಪ್ಪು ಬಣ್ಣದ ಸ್ಲೆಂಡರ್ ಪ್ಲೆಸ್ ದ್ವಿ–ಚಕ್ರ ವಾಹನವನ್ನು ಸಂಜೆ 4.30 ರಿಂದ 5.00 ರವರೆಗೆ ನನ್ನ ಮತ್ತು ಚಾಸಾ–4 ಮತ್ತು 5 ರವರ ಸಮಕ್ಷಮ ವಶಪಡಿಸಿಕೊಂಡರು ಎಂದರೆ ಸರಿ. ಚಾಸಾ–6 ರವರ ತಪ್ಪು ತಿಳುವಳಿಕೆಯಿಂದ ಅಪಘಾತಪಡಿಸಿದ ಕೆಎ–09–ಟಿ–8606 ಎಂದು ಹೇಳಿದ್ದೆ ಎಂದರೆ ಸರಿ. ಆ ನಂತರದಲ್ಲಿ ಅಪಘಾತ ಸ್ಥಳದಲ್ಲಿ ಇದ್ದ ಚಾಸಾ–8 ಮತ್ತು 9 ರವರನ್ನು ವಿಚಾರಿಸಲಾಗಿ ಅಪಘಾತಪಡಿಸಿದ ಟ್ರಾಕ್ಟರ್ ಸಂಖ್ಯೆಃ ಕೆಎ–10–ಟಿ–8697 ಮಹೀಂದ್ರ ಟ್ರಾಕ್ಟರ್ ಆಗಿತ್ತು ಎಂದರೆ ಸರಿ. ಆ ಬಗ್ಗೆ ನಾನು ದಿಃ 02.02.2023 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**